## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.14-2021** **ಪಿ . ಡಬ್ಲ್ಯೂ: 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಡಿ.ಪಿ.ಪ್ರಭುಸ್ವಾಮಿ<br>ದೇವನೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 14-03-2025.** |

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್.ಆರ್ ವಕೀಲರಿಂದ:**

5. ದಾವಾದ ಸಿ ಷೆಡ್ಯೂಲ್ ನಲ್ಲಿ 10 ಅಡಿ ಜಾಗಕ್ಕೆ ಸಂಬಂಧಿಸಿದಂತೆ ಪರಿಹಾರ ಕೋರಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ, ಸದರಿ ಪೊಟೋದಲ್ಲಿ ಕಾಣುತ್ತಿರುವ ವಿದ್ಯೂತ್ ಕಂಬವೇ ದಾವಾ ಸಿ ಷೆಡ್ಯೂಲ್ ಸ್ವತ್ತಿನಲ್ಲಿ ಇರುವ ವಿದ್ಯೂತ್ ಕಂಬವಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಸದರಿ ಪೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಯಾವುದೇ ರಸ್ತೆ ಕಾಣುತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಕ್ರಯ ಪತ್ರದಲ್ಲಿ ರಸ್ತೆ ಇರುವ ಬಗ್ಗೆ ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮತ್ತೊಂದು ಪೊಟೋವನ್ನು ತೋರಿಸಿ, ಸದರಿ ಪೋಟೋದಲ್ಲಿ ಕಾಣುತ್ತಿರುವ ನೀರು ಹರಿಯುವ ಹಳ್ಳವು ನಿಮ್ಮ ಮತ್ತು ಪ್ರತಿವಾದಿಯ ಜಮೀನಿನ ನಡುವೆ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಹೌದು ಎಂದು ಒಪ್ಪಿಕೊಂಡಿದ್ದು ಸದರಿ ಪೋಟೋವನ್ನು ನಿಡಿ-2 ಎಂದು

ಗುರುತಿಸಲಾಯಿತು. ನಿಡಿ-2 ರಲ್ಲಿ ಓಡಾಡುತ್ತಿರುವ ಕುರುಹು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಈಗ ಹಳ್ಳ ತೆಗೆದು ಪೋಟೋ ತೆಗೆಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ದಾವಾ ಸಿ ಷೆಡ್ಯೂಲ್ ನಲ್ಲಿ ಕೋರಿರುವ ರಸ್ತೆಯು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಜಮೀನಿಗೆ ತಿರುಗಾಡಲು ಸರ್ಕಾರಿ ರಸ್ತೆ ಇದ್ದರೂ ಸಹ ಸದರಿ ರಸ್ತೆಯೂ ನನ್ನ ಜಮೀನಿಗೆ ದೂರವಾಗುತ್ತದೆ ಎಂಬ ಉದ್ದೇಶದಿಂದ ಪ್ರತಿವಾದಿಯ ಜಮೀನಿನಲ್ಲಿ ನನ್ನ ಜಮೀನಿಗೆ ಹೋಗಲು ಯಾವುದೇ ರಸ್ತೆ ಇಲ್ಲದೇ ಇದ್ದರು, ರಸ್ತೆ ಇದೆ ಎಂದು ಈ ದಾವಾವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಯಾವ ಕಡೆಗೆ ರಸ್ತೆ ಇರುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಎಲ್ಲಿಯೂ ಸಹ ದಾರಿಯ ಬಗ್ಗೆ ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಯೋಗಿ ರವರ ಮುಖೇನ ಸ್ಥಳ ತನಿಖೆಯನ್ನು ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**